

ನಾಳಿನ ಚಿಂತೆ ಮಾಡದವ. ಯಾವ ಕೆಲಸವನ್ನೂ ಸ್ಥಿರವಾಗಿ ದೀರ್ಘ ಕಾಲ ಮಾಡುವ ಜಾಯಮಾನದವನಲ್ಲ, ಮದುವೆಗೆ ಮುಂಚೆಯೇ ಪೊಲೀಸ್ ಪೇದೆ ಕೆಲಸವಿತ್ತಂತೆ ಶಿವಮೊಗ್ಗೆಯಲ್ಲಿ ನೆಟ್ಟಗೆ ಒಂದು ತಿಂಗಳೂ ಪೂರ್ತಿ ಮಾಡಲಿಲ್ಲ ಸಾಹೇಬನ ಜೊತೆ ಸರಿ ಬರಲಿಲ್ಲ ಎಂದು ರಾಜೀನಾಮೆ ಬಿಸಾಕಿ ಬಂದುಬಿಟ್ಟನಂತೆ.

ಅಪ್ಪನ ಕೋಪದ ಬಗ್ಗೆ ಅಣ್ಣನಿಗೆ ಚೆನ್ನಾಗಿ ತಿಳಿದಿದೆ. ಏಕೆಂದರೆ ಅವನಿಗೆ ಅಪ್ಪನಿಂದ ಗೂಸಾ ತಿಂದ ಅನುಭವವಿದೆ. ಅಕ್ಕ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗ ಮೇಷ್ಟ್ರು ಹೊಡದ್ರು ಅಂತ ಶಾಲೆಗೆ ಹೋಗಿ ರಂಪಾಟ ಮಾಡಿ ಆ ಬೋ..ಮಗನ ಸ್ಕೂಲೇ ಬೇಡ ಅಂತ ಶಾಲೇನೇ ಬಿಡಿಸಿದ ಭೂಪ ನಮ್ಮಪ್ಪ. ಆಗೊಮ್ಮೆ ಈಗೊಮ್ಮೆ ಅಮ್ಮನಿಗೂ ಬಾರಿಸ್ತಿದ್ದ ಅಂತ ಅಣ್ಣನೇ ನನಗೆ ಹೇಳಿದ್ದು. ಒಮ್ಮೆ ಅಮ್ಮನಿಗೆ ಸುಮ್ಮನೆ ಕೀಟಲೆಗೆ ಕೇಳಿದೆ. ಅಪ್ಪಾ ನಿನಗೆ ಹೊಡೀತಿದ್ನಾ ಅಂತ. ನಿಮಪ್ಪನಿಗೆ ಹುಚ್ಚು ಪ್ರೀತಿ ಹುಚ್ಚು ಕೋಪ ಸಂಸಾರ ಅಂದ್ಮೇಲೆ ಅದಲ್ಲಾ ಇರೋದೇ ಅಂತ ಹಾರಿಸಿದಳು. ಅಪ್ಪನ ಬಗ್ಗೆ ಮಕ್ಕಳಲ್ಲಿ ಸದರದ ಭಾವನೆ ಬಾರದಿರಲಿ ಎಂದು ಎಷ್ಟು ಚೆನ್ನಾಗಿ ಎಚ್ಚರ ವಹಿಸಿದಳು. ಅಮ್ಮ ಜಾಣ್ಮೆ ಮತ್ತು ಸಂಯಮದ ಪ್ರತೀಕ ಎಂಬುದರಲ್ಲಿ ಸಂಶಯವಿಲ್ಲ.

ಅಪ್ಪನ ದಿನದ ಗಳಿಕೆ ಆ ದಿನದ ಅವನ ಕೆಲಸ ಮಾಡುವ ಮೂಡ್ ಮೇಲೆ ಅವಲಂಬಿತವಾಗಿದ್ದರಿಂದ ಬಡತನಕ್ಕೆ ನಮ್ಮ ಸಂಸಾರವನ್ನು ಬಿಟ್ಟು ಹೋಗುವ ಅವಶ್ಯಕತೆ ಬೀಳಲೇ ಇಲ್ಲ. ಸಂಸಾರದ ವಿಷಯದಲ್ಲಿ ಹೀಗೆ ಬೇಕಾಬಿಟ್ಟಿಯಿದ್ದ ಅಪ್ಪನಿಗೆ ಏಕೋ ಏನೋ ಊರಿನ ಉಸಾಬರಿ ಅಂದ್ರೆ ಎಲ್ಲಿಲ್ಲದ ಉತ್ಸಾಹವಂತೆ. ಮಂದಿ ಕೆಲ್ಸ ಅಂದ್ರೆ ಯಾವಾಗ್ಲೂ ಮುಂದು. ಯಾರ್ ಮನೇಲಿ ಹೆಣ ಬಿದ್ರೂ ಚಟ್ಟದ ಮುಂದಿನ ಬೊಂಬು ಅಪ್ಪನ ಹೆಗಲ್ಗೇ ಅನ್ನೋದು ಊರ್ ಮಾತು. ಊರ್ ಜಾತ್ರೆ ಬಂತು ಅಂದ್ರೆ ಮಜ್ಜಿಗೆ ಬಿಡಾರ ಅಪ್ಪಂದೇ. ಅದು ಮದ್ವೆ ಆಗ್ಲಿ ಇಲ್ಲಾ ತಿಥಿ ಆಗ್ಲಿ, ಪಂಚೆ ಎತ್ತಿ ಕಟ್ಟಿದ ಅಂದ್ರೆ ಮುಗೀತು.. ಕಡೇ ಪಂಕ್ತಿವರ್ಗೂ ಅಪ್ಪಂದೇ ದರ್ಬಾರು. ಯಾರ್ ಮನೇಲಿ ಹಾವು ಹೊಕ್ಕಿದ್ರೂ ಅದಕ್ಕೆ ಅಪ್ಪನ ಕೋಲಿಂದನೇ ಶಾಸ್ತಿ. ಎಂಥಾ ಹೆಡೆ ಬಿಚ್ಚಿದ ನಾಗನ ಕತೇನೂ ಒಂದೇ ಏಟಲ್ಲಿ ಮುಗಿಸ್ಬಿಡ್ತಿದ್ನಂತೆ, ಅಷ್ಟು ಕರಾರುವಾಕ್ ಹೊಡೆತ ನಮ್ಮಪ್ಪಂದು. ಅಪ್ಪನ ಹಾವಿನ ಕೋಲು ಅಂತ ಅಕ್ಕ ಇನ್ನೂ ಆ ಕೋಲನ್ನು ತನ್ ಹತ್ರ ಇಟ್ಕೊಂಡಿದ್ದಾಳೆ ಅಪ್ಪನ ನೆನಪಿಗೆ ಅಂತ.

ನಮ್ಮ ಮನೆಯ ಎದುರು ಮನೆಯೇ ನಮ್ಮ ದೊಡ್ಡಪ್ಪನ ಮನೆ. ಅಪ್ಪನಿಗೂ ದೊಡ್ಡಪ್ಪನಿಗೂ ಯಾವಾಗಲೂ ಎಣ್ಣೆ ಸೀಗೆಕಾಯಿಯೇ. ಒಮ್ಮೆ ನಮ್ಮ ದೊಡ್ಡಪ್ಪನ ಮನೆಗೆ ಒಂದು ಉಡ ಹೊಕ್ಕಿಬಿಟ್ಟಿತ್ತಂತೆ. ಉಡ ಹೊಡೆಯುವುದು ಅಪಶಕುನ ಅಂತ ಊರ ಗಂಡಸರೆಲ್ಲಾ ಹಿಂದೇಟು ಹಾಕುತ್ತಿರುವಾಗ ಅಪ್ಪ ಹಿಂದೆ ಮುಂದೆ ನೋಡದೆ ಮಚ್ಚು ಹಿಡಿದು, ಹೆಂಚಿನ ಮನೆ ಮೇಲೇರಿ, ಹೊಂಚು ಹಾಕಿ ಉಡವನ್ನು ತುಂಡು ತುಂಡು ಮಾಡಿದ ಅಪ್ಪನ ಪ್ರತಾಪವನ್ನು ಜನ ಈಗಲೂ ನೆನಪಿಸಿಕೊಳ್ಳುತ್ತಾರೆ. ನಮ್ಮೂರಿಗೆ ಸರಿಯಾಗಿ ಹದಿನಾರು ಮೈಲಿ ದೂರದಲ್ಲಿ ಅಪ್ಪನ ಅಕ್ಕನ ಊರು. ಒಮ್ಮೆ ಅವರಕ್ಕನ ಜಮೀನಿನ ವಿಚಾರವಾಗಿ ಪಕ್ಕದ ಜಮೀನು ಮಾಲೀಕನೊಂದಿಗೆ ಭಾರೀ ಗಲಾಟೆಯಾಗಿ ಅಪ್ಪ ಹದಿನೈದು ದಿನ ಮಚ್ಚು ಹಿಡಿದು ಹಗಲು ರಾತ್ರಿ ಅವರ ತೋಟ ಕಾಯ್ದಿದ್ದನಂತೆ. ಹದಿನೈದು ದಿನ ತನ್ನೂರಲ್ಲಿ ಹೆಂಡತಿ ಮಕ್ಕಳ ಪಾಡೇನು ಎಂಬ ಆಲೋಚನೆ ನನ್ನಪ್ಪನ ತಲೆಯಲ್ಲಿ ಬಂದಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಊರಿಗೆ ಬರುವಾಗ ಮಾತ್ರ ಮೂರು ದಪ್ಪ ಹಲಸಿನ ಹಣ್ಣುಗಳನ್ನು ಅಡಿಕೆ ಹಾಳೆಯಲ್ಲಿ ಸುತ್ತಿ ತಲೆಯ ಮೇಲೆ ಹೊತ್ತು ನಡದೇ ಬಂದಿದ್ದನಂತೆ. ಅಂಥಾ ಗಟ್ಟಿಗ ನನ್ನಪ್ಪ.

ಈಗ ಅಪ್ಪನೂ ಇಲ್ಲ, ಅವರಕ್ಕನೂ ಇಲ್ಲ. ಮೊನ್ನೆ ಒಂದು ಮದುವೆ ಮನೆಯಲ್ಲಿ ಅವರ ಮಗ ಸಿಕ್ಕಿದ್ದ. ಅಪ್ಪನ ನೆನಪಿದೆಯೇ ನಿನಗೆ ಎಂದು ಕೇಳಿದ, ಅಷ್ಟು ಸ್ಪಷ್ಟವಿಲ್ಲ ಎಂದೆ. ಅಪ್ಪನ ಗುಣಗಾನ ಮಾಡಿದ. ನೀವು ಎಲ್ಲಾ ಮಕ್ಕಳೂ ಕೂಡಿದರೂ ನಿಮ್ಮಪ್ಪನ ಸಾಮರ್ಥ್ಯಕ್ಕೆ ಸಮನಲ್ಲ ಆದರೇನು ಪಾಪ ಅವರಿವರ ಚಾಕರಿಯಲ್ಲೇ ಅವನ ಜೀವನ ಕಳೆದ್ಹೋಯ್ತು ತಾನಾಯ್ತು, ತನ್ ಸಂಸಾರ ಆಯ್ತು ಅಂತ